ಘಟಪ್ರಭಾ ಯೋಜನೆ ಉಪಕಾಲುವೆ

377(2218); ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ)

ಅ) ಬೆಳಗಾವಿ ಜಿಲ್ಲೆಯ ಘಟಪ್ರಭಾ ಯೋಜನೆಯಡಿ ಬರುವ ಚಿಕ್ಕೋಡಿ ಉಪ ಕಾಲುವೆಯ ಒಟ್ಟು ಉದ್ದ ಎಷ್ಟು

ಆ) ಈ ಕಾಲುವೆಯನ್ನು ಯಾವಾಗ ನಿರ್ಮಿಸಲಾಗಿದೆ; (ಹಂತವಾರು ವಿವರ ನೀಡುವುದು)

ಇ) ಈ ಕಾಲುವೆಗೆ ಒಟ್ಟು ಹಂಚಿಕೆ ಮಾಡಲಾದ ನೀರು ಎಷ್ಟು

ಈ) ಈ ಕಾಲುವೆಯ ಕೊನೆಯ ಭಾಗಗಳಲ್ಲಿ ಒಮ್ಮೆಯೂ ಸಹ ನೀರು ಹರಿಯದೇ ಇರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ

ಉ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ನೀರು ಹರಿಸಲು ಸರಕಾರ ಏನು ಕ್ರಮ ಜರುಗಿಸುತ್ತದೆ?

ಶ್ರೀ ಎಂ.ಬಿ. ಪಾಟೀಲ (ಜಲಸಂಪನ್ಮೂಲ ಸಚಿವರು)

ಅ) ಬೆಳಗಾವಿ ಜಿಲ್ಲೆಯ ಘಟಪ್ರಭಾ ಯೋಜನೆಯಡಿ ಬರುವ ಚಿಕ್ಕೋಡಿ ಉಪ ಕಾಲುವೆಯ ಒಟ್ಟು ಉದ್ದ 88 ಕಿ.ಮೀ ಇರುತ್ತದೆ.

ಆ) ಈ ಕಾಲುವೆಯ ನಿರ್ಮಾಣವನ್ನು 1980ನೇ ಸಾಲಿನಲ್ಲಿ ಪ್ರಾರಂಭಿಸಿ 1988ರಲ್ಲಿ ಪೂರ್ಣಗೊಳಿಸಲಾಗಿದೆ.

ಇ) ಈ ಕಾಲುವೆಗೆ ವಿನ್ಯಾಸದಂತೆ ಒಟ್ಟು ಹಂಚಿಕೆ ಮಾಡಲಾದ ನೀರಿನ ಪ್ರಮಾಣ 8.85 ಟಿ.ಎಂ.ಸಿ ಇರುತ್ತದೆ.

ಈ) ಯೋಜನೆಯ ಪ್ರಾರಂಭದಲ್ಲಿ ಕಾಲುವೆಯ ಕೊನೆಯ ಭಾಗದವರೆಗೆ ನೀರು ಹರಿಸಲಾಗುತ್ತಿತ್ತು.

ಉ) ಸದರಿ ಯೋಜನೆಯಲ್ಲಿ ಬೆಳೆ ಪದ್ಧತಿ ಉಲ್ಲಂಘನೆ, ಅನಧಿಕೃತ ನೀರಾವರಿ ಪಂಪಗಳು (ಅಂದಾಜು 2000), ಅನಧಿಕೃತ ಸ್ಟೈಫನ್‌ಗಳು, ಕಾಲುವೆಯ ಬೆಡ್ಡ್‌ನಲ್ಲಿ ಹಾಕಿರುವ ಪೈಪುಗಳು, ಕಾಲುವೆಯ ಪಕ್ಕದಲ್ಲಿ ಅನಧಿಕೃತವಾಗಿ ಅಗೆದಿರುವ ಭಾವಿಗಳು, ಕಬ್ಬೂರ ಸುರಂಗ ಮಾರ್ಗದಲ್ಲಿ approach & exit ಹಾಗೂ ಸುರಂಗದ ಭಾವಿಯಲ್ಲಿ ಅನಧಿಕೃತವಾಗಿ ಅಳವಡಿಸಿರುವ ಪಂಪ್‌ಗಳು (ಅಂದಾಜು 300), ಚಿಕ್ಕೋಡಿ ಶಾಖಾ ಕಾಲುವೆಯ ಕಿಮಿ 36 ಮತ್ತು 37ರಲ್ಲಿ ಡಿಪ್‌ಕಟ್ ಇದ್ದು, ಡಿಪ್‌ಕಟ್ಟಿನ ಇಳಿಜಾರಿನಲ್ಲಿ ಝಾಜ (Jazz) ವರ್ಗೀಕರಣದ ಕಲ್ಲು ಇರುತ್ತದೆ. ಈ ಝಾಜ (Jhaaz) ಕಲ್ಲಿನ ಗುಣವೇನೆಂದರೆ ಬೇಸಿಗೆಯಲ್ಲಿ ಹಾಗೂ ಮಳೆಗಾಲದ ವಾತಾವರಣದಲ್ಲಿ weathering action ನಿಂದ ಪುಡಿಪುಡಿಯಾಗಿ ಜಾರಿ ಬೀಳುತ್ತಿದೆ. ಇದರಿಂದ ಕಿ.ಮೀ 36 & 37 ರಲ್ಲಿನ ಡಿಪ್‌ಕಟ್‌ನ ಬದಿಗಳು ಜಾರಿ ಬೀಳುತ್ತಿದ್ದು, ಸುಮಾರು 1 ರಿಂದ 1.5 ಮೀ ಆಳದವರೆಗೆ ಕಾಲುವೆಯಲ್ಲಿ ಸಿಲ್ಟ್ ಸಂಗ್ರಹವಾಗಿದೆ. ಜೊತೆಗೆ ಮಳೆಯಿಂದಾಗಿ ಝಾಜ (Jhaaz) ಕಲ್ಲು ಪುಡಿಪುಡಿಯಾಗಿ ಕಾಲುವೆಯ ಬದಿಗಳು ಜಾರಿ ಕಾಲುವೆಗಳ ಬಿದ್ದು ನೀರಿನ ಹರಿಯುವಿಕೆಗೆ ತೊಂದರೆ, ಮಳೆಯ ಅಭಾವ, ರೈತರ ಒತ್ತಡ ಹಾಗೂ ಜನ ಪ್ರತಿನಿಧಿಗಳ ಬೇಡಿಕೆಗಳ ಹಿನ್ನೆಲೆಯಲ್ಲಿ, ಮಾನವೀಯತೆ ದೃಷ್ಟಿಯಿಂದ ಜಿಲ್ಲಾಡಳಿತವು ಕಾಲಕಾಲಕ್ಕೆ ನೀಡುತ್ತಿರುವ ಆದೇಶಗಳನ್ವಯ ಕೆರೆಗಳನ್ನು ತುಂಬಿಸಲಾಗುತ್ತಿದ್ದು. ಹೀಗೆ ಕೆರೆಗಳನ್ನು ತುಂಬಿಸುವಾಗ ನೀರಾವರಿ ನಿರ್ವಹಣೆಯಲ್ಲಿ ಆಗುತ್ತಿರುವ ಏರುಪೇರು ಈ ಕಾರಣಗಳಿಂದ ಕಾಲುವೆಯ ಕೊನೆಯ ಭಾಗದವರೆಗೆ ನೀರು ಹರಿಸಲು ಸಾಧ್ಯವಾಗುತ್ತಿಲ್ಲ.

ಆದಾಗ್ಯೂ ಮೇಲೆ ಹೇಳಿದ ತೊಂದರೆಗಳನ್ನು ನಿವಾರಿಸಿ, ಚಿಕ್ಕೋಡಿ ಶಾಖಾ ಕಾಲುವೆಯ ಕೊನೆಯ ಭಾಗಕ್ಕೆ ನೀರು ಹರಿಸಲು ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗುವುದು.

1. ರೈತರು ಯೋಜಿತ ಬೆಳೆ ಪದ್ಧತಿಗೆ ಬದ್ದರಾಗಿರುವಂತೆ ಜಾಗೃತಿಗೊಳಿಸಲು ಕ್ರಮ ಜರುಗಿಸಲಾಗುವುದು.

2. ಅನಧಿಕೃತ ಪಂಪಸೆಟ್ ಬಳಕೆಯನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದು.

3. ಚಿಕ್ಕೋಡಿ ಶಾಖಾ ಕಾಲುವೆಯ ಕಿ.ಮೀ. 1 ರಿಂದ 35ರ ವರೆಗೆ ಆಧುನೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

4. ಚಿಕ್ಕೋಡಿ ಶಾಖಾ ಕಾಲುವೆಯ ಕಿ.ಮೀ 36 ಮತ್ತು 37ರ ಡಿಪ್‌ಕಟ್ಟಿನ ಇಳಿಜಾರಿನಲ್ಲಿ ಝಾಜ (Jazz) ವರ್ಗೀಕರಣದ ಕಲ್ಲು ಪುಡಿಪುಡಿಯಾಗಿ ಜಾರಿ ಬೀಳುವುದನ್ನು ತಡೆಗಟ್ಟಲು ಭೂ ವಿಜ್ಞಾನಿಯವರಿಂದ ಭೂಸ್ಥಾವರಗಳ ಪರಿಶೀಲನೆ ನಡೆಸಿ ಅವರ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ತಯಾರಿಸಿ ಕ್ರಮ ಜರುಗಿಸಲಾಗುವುದು.

ಭೂ ಪರಿವರ್ತನೆಯಾಗದೆ ಅನಧಿಕೃತ

378(4845); ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)

ಅ) ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ ಭೂ ಪರಿವರ್ತನೆಯಾಗದೆ ಅನಧಿಕೃತ ಬಡಾವಣೆಗಳನ್ನು ನಿರ್ಮಾಣ ಮಾಡಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.?

ಆ) ಯಾವ ಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ವಿಸ್ತೀರ್ಣದಲ್ಲಿ ಬಡಾವಣೆ ನಿರ್ಮಿಸಲಾಗಿದೆ ಸದರಿ ಬಡಾವಣೆಗಳ ಸರ್ವೆ ನಂಬರು, ಗ್ರಾಮ ಮತ್ತು ವಿಸ್ತೀರ್ಣದ ಮಾಹಿತಿ ಒದಗಿಸುವುದು.?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು.?